ತೂರಿಸಿದ ಮೂರನೇ ಲಕೋಟೆ ಇಲ್ಲಿ ಮೇಜಿನ ಮೇಲಿದೆ! ಆತ ಲೈಟಿನ ಬದಲು ಮೇಣದ ಬತ್ತಿ ಬಳಸಿರಬೇಕು. ಬಂದಿದ್ದು ಗೊತ್ತಾಗಬಾರದು ಅಂತ."

"ಸಾಧ್ಯವಿಲ್ಲ. ನೋಡಿ, ಮೇಣದ ಬತ್ತಿ ತುಸುವಷ್ಟೇ ಉರಿದಿದೆ. ಅಂದರೆ ಕೆಲ ಕ್ಷಣಗಳು ಮಾತ್ರ! ಅದರ ಅರ್ಥ ಮೇಣದ ಬತ್ತಿ ಹಚ್ಚಿದ್ದು ಬೆಳಕಿಗಾಗಿ ಅಲ್ಲ!"

"ಮತ್ತೇಕೆ ಹಚ್ಚಿದ?"

ಹೊನ್ನರಾಜುವಿನ ಪ್ರಶ್ನೆಗೆ ಕರಮಚಂದ ಪ್ರತಿಕ್ರಿಯಿಸದೇ, ಒಡೆದ ಲಕೋಟೆಯನ್ನು ಸೂಕ್ಷ್ಮವಾಗಿ ಗಮನಿಸತೊಡಗಿದ. ಒಡೆಯದೇ ಇದ್ದ ಲಕೋಟೆಗಳ ಮೇಲೆ ಚುರುಕಿನ ನಜರು ಹರಿಸಿದ ಕರಮಚಂದ ಉದ್ಗಾರ ತೆಗೆದ,

"ಹೊನ್ನರಾಜು, ನಿನ್ನೆ ರಾತ್ರಿ ಸಂಪಂಗಿ ಮನೆಯೊಳಗೆ ಬಂದೇ ಇಲ್ಲ!"

"ಹಾಗಿದ್ರೆ ಆ ಲಕೋಟೆ ಮೇಜಿನ ಮೇಲೆ ಹೇಗೆ ಬಂದಿತು?" ನಾನೂ ಚಕಿತಗೊಂಡಿದ್ದೆ.

"ಸಂಪಂಗಿ ಬಂದಿಲ್ಲ. ಆದರೆ ಬೇರೆ ಯಾರೋ ಬಂದಿದ್ದಾರೆ! ಆ ವ್ಯಕ್ತಿ ಈ ಲಕೋಟೆಯನ್ನು ಕಂಡು ಮೇಜಿನ ಮೇಲಿರಿಸಿದ್ದಾನೆ, ಅಷ್ಟೇ."

ಹೊನ್ನರಾಜು ಅಚ್ಚರಿಯಲ್ಲಿ ಬಾಯಿ ಅಗಲ ಮಾಡಿದ. ಆತನ ಕಣ್ಣುಗಳಲ್ಲೇ ಪ್ರಶ್ನೆಗಳಿದ್ದವು.

"ನೋಡಿ ಇಲ್ಲಿ, ಒಡೆದ ಲಕೋಟೆ. ಅದರ ದಿನಾಂಕ ನಾಲ್ಕು ದಿನಗಳ ಹಿಂದಿನದು. ಅಂದರೆ ಆತನಿಗೆ ಬಂದ ಎರಡನೇ ಲಕೋಟೆ. ಅದನ್ನು ಒಡೆಯಲಾಗಿದೆ. ಹೊನ್ನರಾಜು, ನೀವು ಆವತ್ತು ನೋಡ್ದಾಗ ಅದು ಒಡೆದಿರಲಿಲ್ಲವೆಂದು ಹೇಳಿದ್ರಿ. ಪ್ರಾಯಶಃ ಆ ನಂತ್ರ ಅದನ್ನು ಒಡೆದಿದ್ದಾನೆ. ನಿನ್ನೆ ಆತ ಒಳಗೆ ಬಂದಿದ್ದರೆ, ನಿನ್ನೆ ನೀವು ಎಸೆದ ಕವರನ್ನು ಒಡೆಯಲೇಬೇಕಿತ್ತಲ್ಲವೇ?..."

"ಹಾಗಿದ್ರೆ ಮೊದಲನೆ ಕವರನ್ನು ಒಡೆಯಬೇಕಿತ್ತಲ್ಲವೆ?" ನಾನು ಮರು ಪ್ರಶ್ನೆ ಹಾಕಿದೆ.

"ಅದರ ಅಗತ್ಯವೇ ಇಲ್ಲ! ಯಾಕಂದ್ರೆ ಆ ಲಕೋಟೆ ಖಾಲಿ. ನೋಡಿ ಇಲ್ಲಿ" ಹಾಗೆಂದು ಕರಮಚಂದ ಅದನ್ನು ಬಲ್ಬಿನ ಎದುರು ಹಿಡಿದ. ಒಳಗೆ ಏನೂ ಇರಲಿಲ್ಲ!

"ಇಷ್ಟೇ ಅಲ್ಲ. ನೋಡಿ ಇಲ್ಲಿ, ನೆಲದ ಮೇಲೆ ಮಣ್ಣಿನ ಮೇಲೆ ಕಾಲಿರಿಸಿ ಬಂದದ್ದರಿಂದ ಮೂಡಿದ ಹೆಜ್ಜೆ ಗುರುತು. ನಿನ್ನೆ ಮಳೆ ಬಂದಿದ್ದು ಒಳ್ಳೆದಾಯ್ತು! ಇದರ ಗಾತ್ರವನ್ನು, ಅದೋ ಅಲ್ಲಿರುವ ಚಪ್ಪಲಿಗೆ ಹೋಲಿಸಿ ನೋಡಿ. ಈ ಪಾದ ಆ ಸೈಜಿನ ಚಪ್ಪಲಿಯೊಳಗೆ ತೂರಲು ಸಾಧ್ಯವೇ ಇಲ್ಲ. ಅದು ಸಂಪಂಗಿಯ ಚಪ್ಪಲಿ. ಹಾಗಾಗಿ ಯಾರೋ ಭರ್ಜರಿ ಗಾತ್ರದ ಆಸಾಮಿ ನಿನ್ನೆ ಒಳಕ್ಕೆ ಬಂದಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ." ಕರಮಚಂದ ಜೇಬಿನಿಂದ ಟೇಪ್ ತೆಗೆದು, ಅವರೆಡನ್ನೂ ಅಳೆದು, ಅಳತೆಗಳನ್ನು ಪುಸ್ತಕದಲ್ಲಿ ಗುರುತು ಹಾಕಿಕೊಂಡ.

"ಹಾಗಿದ್ರೆ ಆತನೇ ಮೇಣದ ಬತ್ತಿ ಉರಿಸಿದ್ದೆ?"

"ಅಲ್ಲ. ಅದನ್ನು ಸಂಪಂಗಿಯೇ ಉರಿಸಿದ್ದು ಕಾಗದ ಓದಲು! ನಿನ್ನೆ ಬಂದವನ ಉದ್ದೇಶ ಬೇರೆ!" ಹಾಗೆಂದು ಕರಮಚಂದ ಒಡೆದ ಲಕೋಟೆಯೊಳಗಿದ್ದ ಕಾಗದವನ್ನು ಹೊರತೆಗೆದ. ಏನೂ ಬರಹವಿಲ್ಲದ ಖಾಲಿ ಹಾಳೆ! ಅದನ್ನು ಓದಲು ಮೇಣದ ಬತ್ತಿ ಏಕೆ?

ಆಗ ಕರಮಚಂದ ಅಲ್ಲೇ ಇದ್ದ ಬೆಂಕಿಪೆಟ್ಟಿಗೆಯಿಂದ ಕಡ್ಡಿ ಗೀರಿ, ಮೇಣದ ಬತ್ತಿ ಹಚ್ಚಿ, ಆ ಕಾಗದವನ್ನು ಅದರ ಬಳಿ ಹಿಡಿದ. ಕೆಲ ಕ್ಷಣಗಳಲ್ಲಿ ಅದರಲ್ಲಿ ಅಕ್ಷರಗಳು ಮೂಡಿದವು...
'ಬರಬೇಡ'!

"ಲಿಂಬೆಹಣ್ಣಿನ ರಸಕ್ಕೆ ನೀರು ಸೇರಿಸಿ ಅಥವಾ ಬೇಕಿಂಗ್ ಸೋಡಾ ಬಳಸಿ ಬರೆದರೆ ಅಕ್ಷರಗಳು ಗೋಚರಿಸವು. ಬೆಳಕಿಗೆ ಹಿಡಿದರಷ್ಟೇ ಕಾಣಿಸುತ್ತವೆ! ನೋಡಿ, ಇದರಲ್ಲಿ ಇರುವ ಸಂದೇಶ...